# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು-560 002**

**ಪತ್ರಿಕಾ ಪ್ರಕಟಣೆ** **ದಿನಾಂಕ: 20.12.2019**

## ಗೋವಿಂದರಾಜನಗರ ವಾರ್ಡ್‌ನಲ್ಲಿ "ಅಂತರ್ ಶಾಲಾ/ಕಾಲೇಜುಗಳ ಕ್ರೀಡಾಕೂಟ-2019" ಸಮಾರಂಭ:





ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿದ್ಯಾ ಇಲಾಖೆ ವತಿಯಿಂದ ಗೋವಿಂದರಾಜನಗರ ವಾರ್ಡ್ ವ್ಯಾಪ್ತಿಯ ಪರಮ ಪೂಜ್ಯ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಕ್ರೀಡಾಂಗಣದಲ್ಲಿ ಇಂದು **"ಅಂತರ್ ಶಾಲಾ /ಕಾಲೇಜುಗಳ ಕ್ರೀಡಾಕೂಟ-2019"**ಸಮಾರಂಭಕ್ಕೆ ಪೂಜ್ಯ ಮಹಾಪೌರರು ಚಾಲನೆ ನೀಡಿದರು.

ಈ ವೇಳೆ ಮಾನ್ಯ ವಸತಿ, ತೋಟಗಾರಿಕೆ ಮತ್ತು ರೇಷ್ಮೆ ಖಾತೆ ಸಚಿವರಾದ ಶ್ರೀ ವಿ.ಸೋಮಣ್ಣರವರು, ಸ್ಥಳೀಯ ಪಾಲಿಕೆ ಸದಸ್ಯರಾದ ಶ್ರೀ ಕೆ.ಉಮೇಶ್ ಶೆಟ್ಟಿರವರು, ಕಾವೇರಿಪುರ ವಾರ್ಡ್ ಸದಸ್ಯರಾದ ಶ್ರೀಮತಿ ಪಲ್ಲವಿರವರು, ಆಯುಕ್ತರಾದ ಶ್ರೀ ಬಿ.ಹೆಚ್.ಅನಿಲ್ ಕುಮಾರ್ ರವರು, ವಿಶೇಷ ಅಯುಕ್ತರಾದ ವೃಷಭೇಂದ್ರ ಮೂರ್ತಿ ಹಾಗೂ ಇತರೆ ಗಣ್ಯವ್ಯಕ್ತಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಬಳಿಕ ಕ್ರೀಡಾ ಜ್ಯೋತಿ ಸ್ವೀಕರಿಸಿ ಕ್ರೀಡಾ ಕೂಟಕ್ಕೆ ಚಾಲನೆ ನೀಡಿದರು. ತದನಂತರ ಕ್ರೀಡಾ ಪಟುಗಳಿಗೆ ಪ್ರತಿಜ್ಞಾ ವಿಧಿ ಬೋಧನೆ ಮಾಡಲಾಯಿತು.

ಬಿಬಿಎಂಪಿ ಶಾಲೆಯ ಮಕ್ಕಳ ಪ್ರತಿಭೆಗಳನ್ನು ಗುರುತಿಸಿ ಕ್ರೀಡೆ, ಶಿಕ್ಷಣ, ಉನ್ನತ ವ್ಯಾಸಂಗಕ್ಕೆ ಪಾಲಿಕೆ ಉತ್ತಮ ಸಹಕಾರ ನೀಡುತ್ತಿದ್ದು, ವಿದ್ಯಾರ್ಥಿಗಳಲ್ಲಿ ಪರಿವರ್ತನೆ ತರವು ಕಾರ್ಯಕ್ರಮಗಳನ್ನು ಹೆಚ್ಚಾಗಿ ಆಯೋಜಿಸಬೇಕು ಎಂದು ಮಹಾಪೌರರು ತಿಳಿಸಿದರು.

ಸಮಾರಂಭವನ್ನುದ್ದೇಶಿಸಿ ಮಾತನಾಡಿದ ಮಹಾಪೌರರು, ಪಾಲಿಕೆ ವತಿಯಿಂದ ಉತ್ತಮ ಗುಣಮಟ್ಟದಲ್ಲಿ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಕ್ರೀಡಾಂಗಣವನ್ನು ಸ್ಥಳೀಯ ಪಾಲಿಕೆ ಸದ್ಯಸರಾದ ಉಮೇಶ್ ಶೆಟ್ಟಿ ಅವರು ನಿರ್ಮಿಸಿದ್ದಾರೆ. ಪಾಲಿಕೆ ಶಾಲೆಯ ಮಕ್ಕಳಿಗೆ ಈ ರೀತಿಯ ಕ್ರೀಡಾಂಗಣ ಲಭಿಸಿರುವುದು ಉತ್ತಮ ಕಾರ್ಯ. ಖಾಸಗಿ ಶಾಲಾ/ಕಾಲೇಜುಗಳ ಮಾದರಿಯಲ್ಲಿ ಕ್ರೀಡಾಂಗಣವನ್ನು ನಿರ್ಮಿಸಲಾಗಿದೆ ಎಂದರು.

**ಸಚಿವರಾದ ವಿ.ಸೋಮಣ್ಣರವರು ಮಾತನಾಡಿ,** ಪಾಲಿಕೆ ವತಿಯಿಂದ ಗೋವಿಂದರಾಜನಗರದಲ್ಲಿ ಉನ್ನತಮಟ್ಟದಲ್ಲಿ ಈ ಕ್ರೀಡಾಂಗಣವನ್ನು ನಿರ್ಮಿಸಲಾಗಿದೆ. ಮಕ್ಕಳಿಗೆ ಶಿಕ್ಷಣದ ಜೊತೆಯಲ್ಲಿ ಕ್ರೀಡೆಗಳು ಸಹ ಮುಖ್ಯ. ಕ್ರೀಡಾಕೂಟಗಳಿಂದ ಉತ್ತಮ ಕ್ರೀಡಾಪಟುಗಳು ಬೆಳಕಿಗೆ ಬರುತ್ತಾರೆ. ಇದೇ ರೀತಿ ಪ್ರತಿವರ್ಷವೂ ಕ್ರೀಡಾಕೂಟ ಆಯೋಜನೆ ಮಾಡಿ ಎಂದು ತಿಳಿಸಿದರು.

**ಪಾಲಿಕೆ ಆಯುಕ್ತರು ಮಾತನಾಡಿ,** ಬಿಬಿಎಂಪಿಯ ಮೇಲೆ ಸಾರ್ವಜನಿಕರಲ್ಲಿ ಕೀಳರಿಮೆಯ ಮನೋಭಾವವಿರುತ್ತದೆ. ಆದರೆ, ಪಾಲಿಕೆ ವತಿಯಿಂದ ಬಡವರ್ಗದ ಜನರ ಮಕ್ಕಳಿಗೆ ವಿದ್ಯಾಭ್ಯಾಸ ಕಲ್ಪಿಸುವ ಸೌಲಭ್ಯವನ್ನು ಒದಗಿಸಿದೆ ಎಂದು ತಿಳಿಸಿದರು.

ಪಾಲಿಕೆ ವ್ಯಾಪ್ತಿಗೊಳಪಡುವ ಸಾಕಷ್ಟು ವಿದ್ಯಾರ್ಥಿಗಳು ವಿವಿಧ ಕ್ರೀಡೆಗಳನ್ನಾಡಲು ಉತ್ಸುಕರಾಗಿ ಇಲ್ಲಿಗೆ ಬಂದಿದ್ದೀರಾ. ಕ್ರೀಡೆಗಳಲ್ಲಿ ಸೋಲು ಗೆಲುವು ಸಹಜ. ಎಲ್ಲರೂ ಕ್ರೀಡಾಮನೋಭಾವದಿಂದ ಕ್ರೀಡೆಗಳಲ್ಲಿ ಭಾಗವಹಿಸಿ ಮುಂದಿನ ದಿನಗಳಲ್ಲಿ ಅದು ಒಳ್ಳೆಯದನ್ನು ಮಾಡಲಿದೆ ಎಂದರು.

ಎಲ್ಲಾ ವಿದ್ಯಾರ್ಥಿಗಳು ಒಮ್ಮತದ ನಿರ್ಧಾರಕ್ಕೆ ಬಂದು ಇನ್ನು ಮುಂದೆ ಪ್ಲಾಸ್ಟಿಕ್ ಮತ್ತು ಕಸ ವಿಗಂಡಣೆ ಮಾಡುವ ಬಗ್ಗೆ ನಿಮ್ಮ ಪೋಷಕರು ಹಾಗೂ ಸುತ್ತಮುತ್ತಲಿನ ನಿವಾಸಿಗಳಿಗೆ ಮನವರಿಕೆ ಮಾಡುವ ಕಾರ್ಯ ಮಾಡಬೇಕು. ಸ್ವಚ್ಛ ಸರ್ವೇಕ್ಷಣ್ ಕಾರ್ಯಕ್ರಮದಲ್ಲಿ ಬೆಂಗಳೂರು ಮೊದಲು ಸ್ಥಾನದಲ್ಲಿ ಬರುವಂತೆ ಮಾಡಬೇಕು ಎಂದು ಹೇಳಿದರು.

**ಕ್ರೀಡೆಯಲ್ಲಿ ಪಾಲ್ಗೊಂಡಿರುವ ಪಾಲಿಕೆ ಶಾಲಾ/ಕಾಲೇಜುಗಳ ವಿವರ:**

| **ಶಾಲೆ** | **ಸಂಖ್ಯೆ** |
|---|---|
| ಪ್ರಾಥಮಿಕ ಶಾಲೆ | 15 |
| ಪ್ರೌಢ ಶಾಲೆ | 32 |
| ಪದವಿ ಪೂರ್ವ ಕಾಲೇಜು | 15 |
| ಪದವಿ | 04 |
| ಸ್ನಾತಕೋತ್ತರ ಪದವಿ | 02 |
| **ಒಟ್ಟು** | 68 |

**ಈ ವಿಷಯವನ್ನು ತಮ್ಮ ಮಾಧ್ಯಮದಲ್ಲಿ ಪ್ರಕಟಿಸಲು ಕೋರಿದೆ.**

**ಸಾರ್ವಜನಿಕ ಸಂಪರ್ಕಾಧಿಕಾರಿ**